**ದಿಃ 10.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು** ಹಾಗೂ ಭಾಷಾಂತರಕಾರರಿಗೆ **ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಗೆ ಕನ್ನಡ ಬಾರದ ಕಾರಣ ಹಾಗೂ ತುಳು ಬರುವ ಕಾರಣ ಶ್ರೀ ಆರ್ ಪಿ ಎಸ್ ವಕೀಲರನ್ನು ಇಬ್ಬರೂ ಪಕ್ಷಗಾರರ ಒಪ್ಪಿಗೆಯ ಮೇರೆಗೆ ಭಾಷಾಂತರಕಾರರಾಗಿ ನೇಮಿಸಲಾಗಿರುತ್ತದೆ.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಿ ಎಫ್ ಎಫ್ ವಕೀಲರಿಂದಃ

ತನಿಯಪ್ಪ ಶೇರಿಗಾರರು ವಾದ್ಯ ವೃತ್ತಿಯವರು ಎಂದರೆ ಸರಿ. ಅವರ ಜೊತೆಗೆ ಕೊರಗ ಸಪಲ್ಯರು ಸಹ ವಾದ್ಯ ವೃತ್ತಿ ಮಾಡುತ್ತಿದ್ದರು ಎಂದರೆ ನಿಜ. ಪೂವ ಸಪಲ್ಯರು ತನಿಯಪ್ಪ ಶೇರಿಗಾರರ ಮನೆಯಲ್ಲಿ ಮೃತ ಪಟ್ಟರು ಎಂದರೆ ಸಾಕ್ಷಿ ಹೌದು ಆದರೆ ಹತ್ತಿರದ ಮನೆಯವರು ಎಂದು ನುಡಿಯುತ್ತಾರೆ. ಈಗ ನಾವು ಗುರುಮಂದಿರದ ಹತ್ತಿರದ ಮನೆಯಲ್ಲಿ ಇದ್ದೇವೆ ಎಂದರೆ ನಿಜ. ಗುರುಮಂದಿರದ ಹತ್ತಿರ ಇರುವ ಮನೆಯಲ್ಲಿ ಕೊರಗ ಸಪಲ್ಯ, ಮುಂಡಿ ಸಪಲ್ತಿ ಮತ್ತು ಸೇಸಮ್ಮ ಸಹ ಮೃತಪಟ್ಟಿದ್ದರು ಎಂದರೆ ನಿಜ.

ನಾನು ಮದುವೆಯಾಗುವ ಮೊದಲು ಗುರುಮಂದಿರದ ಹತ್ತಿರದ ಮನೆಯಲ್ಲಿ ಬೀಡಿ ಕಟ್ಟುವ ವೃತ್ತಿ ಮಾಡುತ್ತಿದ್ದೆ ಎಂದರೆ ಸುಳ್ಳು. ನಂತರ ನಾವು ರಾಯರ ಮನೆ ಅಂದರೆ ಯೋಗೀಶ್ವರಿ ಅಮ್ಮ ಅವರ ಸಜಿಪ ಮುನ್ನೂರಿನ ಮನೆಯಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ನಿಜ. ಆ ಸಮಯದಲ್ಲಿ ಯೋಗೀಶ್ವರಿ ಅಮ್ಮನವರ ಗಂಡ ಮೃತಪಟ್ಟರು ಎಂದರೆ ಸಾಕ್ಷಿ ಅದಕ್ಕೂ ಮೊದಲು ಮೃತಪಟ್ಟರು ಎಂದು ನುಡಿಯುತ್ತಾರೆ. ನಾನು ಹಾಗೂ ನನ್ನ ಮಕ್ಕಳು ಯೋಗೀಶ್ವರಿ ಅಮ್ಮನವರ ಮನೆಯಲ್ಲಿ ಉಳಿಯುತ್ತಿದ್ದೆವು ಎಂದರೆ ಸುಳ್ಳು.

ನಂತರ ಯೋಗೀಶ್ವರಿ ಅಮ್ಮನವರ ಮನೆ ಬಿಟ್ಟ ನಂತರ ನಾನು ಸುರಭಿ ಬಾರ್ ಅಂಡ್ ರೆಸ್ಟೋರೆಂಟ್ ನಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸುಳ್ಳು. ನಂತರ ಅರಸ ಕಾಂಪ್ಲೆಕ್ಸ್ ನಲ್ಲಿರುವ ಒಂದು ಹೋಟೇಲ್ ನಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸುಳ್ಳು. ಈಗ ನಾನು ಗುರುಮಂದಿರದ ಹತ್ತಿರದ ಮದುವೆ ಹಾಲ್ ನಲ್ಲಿ ಕೆಲಸ ಮಾಡುತ್ತಿದ್ದೇನೆಂದರೆ ಸಾಕ್ಷಿ ಕಾರ್ಯಕ್ರಮ ಇದ್ದರೆ ಹೋಗುವುದಾಗಿ ನುಡಿಯುತ್ತಾರೆ. ಆ ರೀತಿ ಕಾರ್ಯಹುಕ್ರಮ ಇಲ್ಲದೇ ಇರುವಾಗ ನಾನು ಗುರುಮಂದಿರದಲ್ಲಿ ಸ್ವಚ್ಛತಾ ಕೆಲಸ ಮಾಡುತ್ತಿದ್ದೇನೆ ಎಂದರೆ ಸುಳ್ಳು.

ದಾವಾ ಆಸ್ತಿ ಕುರಿತು ಎಷ್ಟು ದಾವೆಗಳು ಬಾಕಿ ಇವೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಯಾವ ಗ್ರಾಮಕ್ಕೆ ಸೇರಿದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಉತ್ತರಕ್ಕೆ ಏನು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ದಾವಾ ಆಸ್ತಿಯ ದಕ್ಷಿಣಕ್ಕೆ ಏನು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ದಾವಾ ಆಸ್ತಿಯ ಪೂರ್ವ ಮತ್ತು ಪಶ್ಚಿಮಕ್ಕೆ ಏನು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಆಸ್ತಿಯ ಮೂಲ ಮಾಲಕರು ಯಾರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಲಕ್ಷ್ಮೀ ಸಪಲ್ತಿ ಯಾವ ಆಧಾರದಲ್ಲಿ ಸ್ವಾಧೀನ ಹೊಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಗುರುಮಂದಿರದಿಂದ **500** ಮೀಟರ್ ದೂರದಲ್ಲಿ ಬರುತ್ತದೆ ಎಂದರೆ ಸಾಕ್ಷಿ ನ್ಯಾಯಾಲಯದಿಂದ ಬಸ್ ನಿಲ್ದಾಣದ ವರೆಗಿನ ದೂರ ಆಗುತ್ತದೆ ಎಂದು ನುಡಿಯುತ್ತಾರೆ. ನಾನು ವ್ಯವಹಾರ ಮಾಡಲು ಹೋಗಿ ಬರುವಾಗ ದಾವಾ ಆಸ್ತಿ ಮೂಲಕ ಹೋಗಿ ಬರುತ್ತೇನೆ ಎಂದರೆ ನಿಜ. ತನಿಯಪ್ಪ ಶೇರಿಗಾರರ ಮನೆ ಸಹ ದಾವಾ ಆಸ್ತಿಯಿಂದ ಒಂದು ಫರ್ಲಾಂಗ್ ದೂರ ಇದೆ ಎಂದರೆ ನಿಜ. ನಾನು ಬಿಸಿ ರೋಡಿಗೆ ಬರಬೇಕಾದರೆ ಸದರಿ ಜಾಗದಿಂದಲೇ ಬರಬೇಕು ಎಂದರೆ ನಿಜ.

ಲಕ್ಷ್ಮೀ ಸಪಲ್ತಿಗೆ ಮದುವೆ ಆಗಿದ್ದು ಆದರೆ ಮಕ್ಕಳು ಇರುವುದಿಲ್ಲ ಎಂದರೆ ನಿಜ. ಲಕ್ಷ್ಮೀ ಸಪಲ್ತಿ ಮುಂಡಿಸಪಲ್ತಿ ಜೊತೆಗೆ ಬದುಕುತ್ತಿದ್ದರು ಎಂದರೆ ಸಾಕ್ಷಿ ಹೌದು ತಾನು ಹಾಗೂ ಅವರು ಒಟ್ಟಿಗೆ ಇದ್ದೆವು ಎಂದು ನುಡಿಯುತ್ತಾರೆ. ಲಕ್ಷ್ಮೀ ಸಪಲ್ತಿಹಾಗೂ ಮುಂಡಿ ಸಪಲ್ತಿ ಮಾತ್ರ ಒಟ್ಟಿಗೆ ಇದ್ದೆವು ಹಾಗೂ ನಾನು ಬೇರೆ ವಾಸವಿದ್ದೆ ಎಂದರೆ ಸುಳ್ಳು. ನಾನು ಅವರ ಒಟ್ಟಿಗೆ ಇದ್ದೆ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸುಳ್ಳು. ಲಕ್ಷ್ಮೀ ಸಪಲ್ತಿ ಜೀವಂತ ಇದ್ದಾಗ ನನಗೆ ಪಾಲು ಕೊಡುವಂತೆ ದಾವೆ ಹಾಕಲು ತೊಂದರೆ ಇತ್ತೇ ಎಂದರೆ ಸಾಕ್ಷಿ ಅವರು ಕೊಡುತ್ತೇನೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ.

ಲಕ್ಷ್ಮೀ ಸಪಲ್ತಿ ಯಾವಾಗ ಮೃತಪಟ್ಟರು ಎಂದರೆ ಸಾಕ್ಷಿ **5-6** ವರ್ಷಗಳ ಹಿಂದೆ ಎಂದು ನುಡಿಯುತ್ತಾರೆ. ಲಕ್ಷ್ಮೀ ಸಪಲ್ತಿ ಮೃತಪಟ್ಟ ನಂತರ ದಾವಾ ಆಸ್ತಿಯಲ್ಲಿ ಪಾಲು ಕೇಳಿ ದಾವೆ ಹಾಕಲು ಏನು ತೊಂದರೆ ಇತ್ತು ಎಂದರೆ ಸಾಕ್ಷಿ ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ನನಗೆ ಹಕ್ಕು ಇಲ್ಲ ಎಂದು ಗೊತ್ತಿದ್ದ ಕಾರಣ ದಾವೆ ಹಾಕಿರಲಿಲ್ಲ ಎಂದರೆ ಸಾಕ್ಷಿ ತನಗೂ ಹಕ್ಕು ಇರುವ ವಿಚಾರ ಅವರಿಗೆ ಗೊತ್ತಿತ್ತು ಎಂದು ನುಡಿಯುತ್ತಾರೆ.

ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಗಿರುತ್ತದೆ.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,
ಬಂಟ್ವಾಳ.